# 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್‌ಸಿ. 386/2022

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ ಶ್ರೀ ಮಹದೇವು | | ಪ್ರಮಾಣ ಮಾಡಿಸಿದ ದಿನಾಂಕಃ |
| ತಂದೆ/ಗಂಡನ ಹೆಸರು | ಃ ಶ್ರೀ ಲೇ.ಶಿವಣ್ಣ | | 11.09.2024 |
| ವಯಸ್ಸು | ಃ 49 ವರ್ಷ | | |
| ವೃತ್ತಿ | ಃ ಹೆಚ್.ಸಿ, ಎಸ್.ಪಿ ಕಛೇರಿ, ಮೈಸೂರು | ಪ್ರಾ.ಸಾ. ಃ 05 | |
| ವಾಸಸ್ಥಳ | ಃ ಹಿನಕಲ್ | ಚಾ.ಸಾ. ಃ 14 | |

ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ

. ನಾನು *2019* ರಿಂದ *2021* ರವರೆಗೆ ನಂಜನಗೂಡು ಟೌನ್ ಪೋಲೀಸ್ ಠಾಣೆಯಲ್ಲಿ ಹೆಚ್.ಸಿ ಆಗಿ ಕೆಲಸ ಮಾಡಿದ್ದೇನೆ. ದಿಃ*02.11.2019* ರಂದು ನಾನು ಠಾಣಾಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾಗ ಸಂಜೆ *4.35* ಕ್ಕೆ ಸಂಚಾರಿ ಪೋಲೀಸ್ ಠಾಣೆ ಪಿ.ಎಸ್.ಐ ಆದ ಶಿವಮ್ಮ ಇವರು ದಿಃ*01.11.2019* ರಂದು ಸಂಜೆ *5.30* ಕ್ಕೆ ನಂಜನಗೂಡು ಪಟ್ಟಣದ ಅಪೋಲೊ ಸರ್ಕಲ್ ನಲ್ಲಿ ವಾಹನ ತಪಾಸಣೆ ಮಾಡುತ್ತಿರುವಾಗ ಕೆಎ-*41*-ಎಂ.ಸಿ-*4191* ವಾಹನದ ಚಾಲಕನು ಅವರ ಕರ್ತವ್ಯಕ್ಕೆ ಅಡ್ಡಿ ಪಡಿಸಿ ಬೆದರಿಕೆ ಹಾಕಿದ್ದ ಕುರಿತು ದೂರನ್ನು ಕೊಟ್ಟಿದ್ದರು ನಾನು ಆ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ *91/2019* ರಂತೆ ಪ್ರಕರಣ ದಾಖಲಿಸಿ ಎಫ್.ಐ.ಆರ್ ಅನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಕಳುಹಿಸಿದ್ದೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ಸ್ವೀಕರಿಸಿದ್ದ ದೂರು ಇದ್ದು ಅದರಲ್ಲಿ ನನ್ನ ಸಹಿ ಇದೆ.

ಸದರಿ ದೂರನ್ನು ನಿ.ಪಿ–*6* ಮತ್ತು ಸಹಿಯನ್ನು ನಿಪಿ–*6(ಎ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ದಾಖಲೆ ನಾನು ದಾಖಲಿಸಿಕೊಂಡ ಎಫ್.ಐ.ಆರ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಎಫ್.ಐ.ಆರ್ ಅನ್ನು ನಿ.ಪಿ–*7* ಮತ್ತು ಸಹಿಯನ್ನು ನಿಪಿ–*7(ಎ)* ಎಂದು ಗುರುತಿಸಿದೆ.

*2.* ನಂತರ ಅದೇ ದಿನ ಘಟನೆ ನಡೆದ ಸ್ಥಳಕ್ಕೆ ಹೋಗಿ ದೂರುದಾರರು ತೋರಿಸಿದ್ದ ಸ್ಥಳದಲ್ಲಿ ಸಂಜೆ *5.15* ರಿಂದ *6* ಗಂಟೆವರೆಗೆ ಪಂಚರಾದ ಮಂಜು ಮತ್ತು ಶಿವಶಂಕರ ಇವರ ಸಮಕ್ಷಮ ಸ್ಥಳ ಮಹಜರ್ ಮಾಡಿದ್ದೆ. ಆ ಮಹಜರ್ ಕಾಲಕ್ಕೆ ಸ್ಥಳ ನಕಾಶೆಯನ್ನು ಸಹ ತಯಾರಿಸಿದ್ದೆ. ಈಗ ನಾನು ನೋಡುತ್ತಿರುವ ಮಹಜರ್ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಮಹಜರ್ ಅನ್ನು ನಿ.ಪಿ–*8* ಮತ್ತು ಸಹಿಯನ್ನು ನಿ.ಪಿ–*8(ಎ)* ಎಂದು ಗುರುತಿಸಿದೆ. ಆ ಮಹಜರ್ ನೊಂದಿಗಿರುವ ನಕಾಶೆ ನಾನು ತಯಾರಿಸಿದ್ದ ನಕಾಶೆಯಿದೆ. ಸದರಿ ನಕಾಶೆಯನ್ನು ನಿ.ಪಿ–*8(ಬಿ)* ಎಂದು ಗುರುತಿಸಿದೆ. ಈಗ ನಾನು ನೋಡುತ್ತಿರುವ ಇನ್ನೊಂದು ದಾಖಲೆ ಪಂಚರಿಗೆ ಕೊಟ್ಟಿದ್ದ ನೋಟಿಸ್ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ದಾಖಲೆಯನ್ನು ನಿ.ಪಿ–*9* ಮತ್ತು ಸಹಿಯನ್ನು ನಿ.ಪಿ–*9(ಎ)* ಎಂದು ಗುರುತಿಸಿದೆ. ನಂತರ ಕಡತವನ್ನು ಮುಂದಿನ ತನಿಖೆಗಾಗಿ ಪಿ.ಎಸ್.ಐ ರವರಿಗೆ ಕೊಟ್ಟಿದ್ದೆ.

ಪಾಟೀ ಸವಾಲು : ಆರೋಪಿ ಪರ ವಕೀಲರಾದ ಶ್ರೀ ಜಿ.ಎಸ್.ಎನ್ ರವರಿಂದಃ-

*3.* ದೂರು ಸಲ್ಲಿಸಲು *23* ಗಂಟೆಗಳ ಕಾಲ ತಡವಾಗಿದೆ ಎಂದರೆ ನಿಜ. ದಿಃ*01.11.2019* ರಂದು ಆ ಘಟನೆ ಕುರಿತು ಸಾರ್ವಜನಿಕರಿಂದ ಅಥವಾ ನಮ್ಮ ಸಿಬ್ಬಂದಿಗಳಿಂದ ಮಾಹಿತಿ ಬಂದಿರಲಿಲ್ಲ ಎಂದರೆ ನಿಜ. ನಿ.ಪಿ–*9* ನೋಟಿಸ್ ಅನ್ನು ದಿಃ*01.11.2019* ರಂದು

ಕೊಟ್ಟಿದ್ದೇವೆ ಎಂದರೆ ಅದು ದಿನಾಂಕ ತಪ್ಪಾಗಿರಬಹುದಾಗಿದೆ. ಸ್ಥಳ ಮಹಜರ್ ನಲ್ಲಿ ಕಾರಿನ ಸಂಖ್ಯೆ ಮತ್ತು ಆರೋಪಿತರ ಹೆಸರು ನಮೂದು ಇಲ್ಲ ಎಂದರೆ ನಿಜ. ನಿ.ಪಿ-*8* ಮಹಜರ್ ಈ ಪ್ರಕರಣಕ್ಕೆ ಸಂಬಂದಪಟ್ಟಿಲ್ಲ ಎಂದರೆ ಸರಿಯಲ್ಲ. ನಿ.ಪಿ-*8* ರಲ್ಲಿನ ಪಂಚರು ಸ್ಥಳೀಯರಲ್ಲ ಎಂದರೆ ಸರಿಯಲ್ಲ. ಈ ಕೇಸಿಗೊಸ್ಕರ ನಿ.ಪಿ-*8* ಅನ್ನು ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನಕಾಶೆಯಲ್ಲಿ ದಿನಾಂಕ ನಮೂದಿಲ್ಲ ಎಂದರೆ ನಿಜ. ನಕಾಶೆಗೆ ದೂರುದಾರರ ಸಹಿ ಇಲ್ಲ ಎಂದರೆ ನಿಜ. ನಕಾಶೆಯನ್ನು ಸಹ ಠಾಣೆಯಲ್ಲೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಪ್ರಕರಣ ದಾಖಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ:- ಇಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು